# ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(5)ರ ಅಡಿಯಲ್ಲಿ ಸಲ್ಲಿಸಲಾಗಿರುವ ವಿಧಾನ ಮಂಡಲದ ಉಭಯ ಸದನಗಳಲ್ಲಿ ಮಂಡಿಸುವ ಬಗ್ಗೆ ವರದಿ

ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(5)ರಡಿ ಸಲ್ಲಿಸಲಾಗಿರುವ ವರದಿಯನ್ನು ವಿಧಾನ ಮಂಡಲದ ಉಭಯ ಸದನಗಳಲ್ಲಿ ಮಂಡಿಸುವ ಬಗ್ಗೆ ವರದಿ.

ಶ್ರೀ ಸಂತೋಷ್ ಬಾಳಪ್ಪ ಬಾಳಕಾಯಿ ಇವರು ಬೆಳಗಾವಿಯ ಕಾವೇರಿ ನಗರ 2ನೇ ಹಂತದ ಬಡಾವಣೆಗೆ ಬೆಳಗಾವಿ ಮಹಾನಗರ ಪಾಲಿಕೆ ವತಿಯಿಂಥ ಯಾವುದೇ ಮೂಲಭೂತ ಸೌಲಭ್ಯಗಳನ್ನು ಒದಗಿಸಿರುವುದಿಲ್ಲವೆಂದು ಲೋಕಾಯುಕ್ತರಿಗೆ ದೂರು ನೀಡಿದ್ದು, ಮಾನ್ಯ ಉಪ ಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರಡಿಯಲ್ಲಿ ಸಲ್ಲಿಸಿರುವ ದಿನಾಂಕ:29.02.2016ರ ವರದಿಯಲ್ಲಿ ಈ ಕೆಳಕಂಡಂತೆ ಶಿಫಾರಸ್ಸು ಮಾಡಿರುತ್ತಾರೆ( ವರದಿಯ ಪ್ರತಿಯನ್ನು ಲಗತ್ತಿಸಿದೆ).

*" To take appropriate action to redress the grievance and hardship caused to the complainant and the residents of the said layout within 3 months from the date of this reports and shall intimate or cause to be intimated to this authority about the action taken on the said recommendation within one month there of as per Section 12(2) of Karnakata Lokayuktha Act".*

ಮಾನ್ಯ ಉಪ ಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರನ್ವಯ ಸರ್ಕಾರಕ್ಕೆ ಸಲ್ಲಿಸಿದ ವರದಿಯನ್ನು ಆಯುಕ್ತರು, ಬೆಳಗಾವಿ ಮಹಾನಗರ ಪಾಲಿಕೆ ಇವರಿಗೆ ಕಳುಹಿಸಿ, ಸದರಿ ವರದಿಯ ಶಿಫಾರಸ್ಸಿನಂತೆ ಅಗತ್ಯ ಕ್ರಮ ಕೈಗೊಳ್ಳಲು ನಿರ್ದೇಶನ ನೀಡಲಾಗಿರುತ್ತದೆ. ಅದರಂತೆ, ಆಯುಕ್ತರು, ಉಪ ಆಯುಕ್ತರು (ಅಭಿವೃದ್ಧಿ) ಇವರಿಂದ ಸ್ಥಳತನಿಖೆ ಕೈಗೊಂಡು ಮಾನ್ಯ ಲೋಕಾಯುಕ್ತ ಕಚೇರಿಗೆ ಸಲ್ಲಿಸಿರುವ ವರದಿಯಲ್ಲಿ ದೂರುದಾರರಾದ ಶ್ರೀ ಸಂತೋಷ್ ಬಾಳಪ್ಪ ಬಾಳಕಾಯಿ ಇವರು ವಾಸವಿರುವ ನಿವೇಶನವು ಖಾಸಗಿ ಲೇಔಟ್ ವಿನ್ಯಾಸವಾಗಿದ್ದು, ಇವರ ಮೂಲ ಮಾಲೀಕರಾದ ಶ್ರೀ ಧನಸಿಂಗ್ ಭವಾನಿ ಮತ್ತು ಇತರರು ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ದಿನಾಂಕ: 30.05.2001 ರಂದು ಅರ್ಜಿ ಸಲ್ಲಿಸಿ, ಬೆಳಗಾವಿಯ ರಿ.ಸ.ನಂ. 96/2ಬಿ ರ ಕ್ಷೇತ್ರ 03ಎಕರೆ-36ಗುಂಟೆ ಜಮೀನಿಗೆ ವಿನ್ಯಾಸ ಅನುಮೋದನೆ ನೀಡುವಂತೆ ಕೋರಿದ್ದು, ಜಿಲ್ಲಾಧಿಕಾರಿಗಳು ದಿನಾಂಕ: 06.07.2001 ರಂದು ವಸತಿ ಉದ್ದೇಶಕ್ಕಾಗಿ ಬಿನ್ ಶೇತ್ಕಿ ಆದೇಶ ಹೊರಡಿಸಿರುತ್ತಾರೆ. ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರವು ದಿನಾಂಕ: 23.10.2001 ರಂದು ವಸತಿ ವಿನ್ಯಾಸವನ್ನು ಅನುಮೋದಿಸಿ, ಸದರಿ ಬಡಾವಣೆಯ ಅಭಿವೃದ್ಧಿ ಕಾಮಗಾರಿಗಳನ್ನು ಅರ್ಜಿದಾರರ ಸ್ವಂತ ಖರ್ಚಿನಿಂದ ಎರಡು ವರ್ಷಗಳ ಅವಧಿಯಲ್ಲಿ ಪೂರ್ತಿಯಾಗಿ ಮಾಡಿರತಕ್ಕದ್ದು ಹಾಗೂ ಕುಡಿಯುವ ನೀರಿನ ಪೂರೈಕೆ ವ್ಯವಸ್ಥೆ ಷರತ್ತನ್ನು ವಿಧಿಸಲಾಗಿರುತ್ತದೆ.

ಮೇಲ್ಕಂಡ ಬಡಾವಣೆಯನ್ನು ಬೆಳಗಾವಿ ಮಹಾನಗರ ಪಾಲಿಕೆಗೆ ಹಸ್ತಾಂತರ ಮಾಡಿರುವ ಬಗ್ಗೆ ಯಾವುದೇ ದಾಖಲೆಗಳಿರುವುದಿಲ್ಲ. ಆದಾಗ್ಯೂ ಸದರಿ ಕಾವೇರಿ ನಗರ ಬಡಾವಣೆಗೆ ದಿನಾಂಕ:20.09.2016 ರಂದು ಭೇಟಿ ನೀಡಿದ್ದು, ಅರ್ಜಿದಾರರು ವಾಸಿಸುವ ವಿಳಾಸದಲ್ಲಿ ಜನವಸತಿಯು ವಿರಳವಾಗಿದ್ದು, ಸದರಿ ಬಡಾವಣೆಯ ಮಾಲೀಕರು ಬಡಾವಣೆಯನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸದೆ ನಿವೇಶನಗಳನ್ನು ಮಾರಾಟ ಮಾಡಿರುತ್ತಾರೆ. ಸದರಿ ವಿನ್ಯಾಸದಲ್ಲಿ ಮೂಲಭೂತ ಸೌಲಭ್ಯಗಳಾದ ರಸ್ತೆ, ಗಟಾರ, ವಿದ್ಯುತ್ ದೀಪಗಳ ವ್ಯವಸ್ಥೆ ಮೊದಲಾದ ಸೌಲಭ್ಯಗಳನ್ನು ಕಲ್ಪಿಸಿರುವುದಿಲ್ಲ. ಆದುದರಿಂದ ಸದರಿ ಬಡಾವಣೆಯ ವಿನ್ಯಾಸವನ್ನು ದಿನಾಂಕ: 31.12.2003ರಂದು ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರವು ತಾತ್ಕಾಲಿಕವಾಗಿ ಅಮಾನತ್ತು ಪಡಿಸಿರುತ್ತದೆ ಎಂದು ವರದಿ ನೀಡಿರುತ್ತಾರೆ. ಸದರಿ ವರದಿಯ ಹಿನ್ನೆಲೆಯಲ್ಲಿ ಪ್ರಕರಣವನ್ನು ಮುಕ್ತಾಯಗೊಳಿಸುವಂತೆ ಲೋಕಾಯುಕ್ತ ಸಂಸ್ಥೆಯನ್ನು ಕೋರಲಾಗಿರುತ್ತದೆ.

ಆದರೆ, ಮಾನ್ಯ ಉಪ ಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ನಿಯಮ 12(5)ರಡಿಯಲ್ಲಿ ಸಲ್ಲಿಸಿರುವ ವರದಿಯಲ್ಲಿ, ಆಯುಕ್ತರು, ಬೆಳಗಾವಿ, ಮಹಾನಗರ ಪಾಲಿಕೆ ಇವರು ಕಲಂ 12(1)ರಡಿ ಸಲ್ಲಿಸಿರುವ ವರದಿಯನ್ವಯ ಕ್ರಮ ಕೈಗೊಂಡಿರುವುದಿಲ್ಲ ಎಂದು ಹಾಗೂ ಸದರಿ ಬಡಾವಣೆಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವ ಕಾಮಗಾರಿಗಳನ್ನು ಅನುದಾನದ ಲಭ್ಯತೆಯ ಆಧಾರದಲ್ಲಿ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದು, ಸದರಿಯವರು ಸಲ್ಲಿಸಿರುವ ವರದಿಯು ಸಮಂಜಸವಾದ ಹಾಗೂ ನ್ಯಾಯಸಮ್ಮತವಾದ ವರದಿಯಾಗಿರುವುದಿಲ್ಲ ಎಂದು ತಿಳಿಸಿ, ಸದರಿ ವರದಿಯೊಂದಿಗೆ ಕಲಂ(12)1ರಡಿಯಲ್ಲಿ ಸಲ್ಲಿಸಿರುವ ವರದಿಯನ್ನು ಹಾಗೂ ಆಯುಕ್ತರು, ಬೆಳಗಾವಿ ಮಹಾನಗರಪಾಲಿಕೆ ಇವರು ದಿನಾಂಕ: 22.09.2016 ಮತ್ತು 31.03.2017ರಂದು ಸಲ್ಲಿಸಿರುವ ಪತ್ರದ ಪ್ರತಿಗಳನ್ನು ಮಾನ್ಯ ಘನತೆವೆತ್ತ ರಾಜ್ಯಪಾಲರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ( ಕಲಂ 12(5)ರ ವರದಿಯ ಪ್ರತಿಯನ್ನು ಲಗತ್ತಿಸಿದೆ).

ರಾಜ್ಯಪಾಲರ ಅಧೀನ ಕಾರ್ಯದರ್ಶಿಯವರು ದಿನಾಂಕ:09.06.2017ರ ಪತ್ರದಲ್ಲಿ ಮಾನ್ಯ ಉಪಲೋಕಾಯುಕ್ತರವರು ಕಲಂ 12(5)ರಡಿಯಲ್ಲಿ ಸಲ್ಲಿಸಿರುವ ವರದಿಯನ್ನು ವಿಧಾನ ಮಂಡಲದ ಉಭಯ ಸದನಗಳಲ್ಲಿ ಮಂಡಿಸಲು ಕೋರಿರುತ್ತಾರೆ.

ಮಾನ್ಯ ಲೋಕಾಯುಕ್ತರ ವರದಿಯ ಹಿನ್ನೆಲೆಯಲ್ಲಿ ಆಯುಕ್ತರಿಂದ ದಿನಾಂಕ: 17.01.2019 ಮತ್ತು 05.12.2022ರ ಪತ್ರದಾಳಂತೆ ವರದಿ ಪಡೆಯಲಾಗಿದ್ದು, ಪ್ರಸ್ತುತ ಬಡಾವಣೆಯಲ್ಲಿ ಬೀದಿ ದೀಪ ಲೈನ್ ಅಳವಡಿಕೆ, ಕುಡಿಯುವ ನೀರು ಸರಬರಾಜು, ಸಿ.ಸಿ. ಫಟಾರ, ರಸ್ತೆ ಸುಧಾರಣೆ ಹಾಗೂ ನಗರ ನೀರು ಸರಬರಾಜು ವ್ಯವಸ್ಥೆಗಳನ್ನು ಮಾಡಲಾಗಿದೆ. ಬೆಳಗಾವಿಯ ಕಾವೇರಿ ನಗರ 2ನೇ ಹಂತದ ಬಡಾವಣೆಯ ಮೂಲ ಮಾಲೀಕರು ಬೀದಿ ದೀಪ ಅಳವಡಡಿಸದೇ ಇರುವುದರಿಂದ ಹೆಸ್ಕಾಂ ಕಂಪನಿ ವತಿಯಿಂದ ಬೀದಿ ದೀಪದ ಲೈನ್ ಅಳವಡಿಸಲಾಗಿದೆ. ಸದರಿ ಬಡಾವಣೆಯಲ್ಲಿ ಒಟ್ಟು 25 ವಿದ್ಯುತ್ ಕಂಬಗಳಿದ್ದು, ಇಲ್ಲಿ ಒಟ್ಟು 30 ಮನೆಗಳು ನಿರ್ಮಾಣವಾಗಿದ್ದು, 12 ಕಂಬಗಳಿಗೆ ಬೀದಿದೀಪಗಳನ್ನು ಅಳವಡಿಸಲಾಗಿದೆ. ಸದರಿ ದೀಪಗಳ ನಿರ್ವಹಣೆಯನ್ನು ಪಾಲಿಕೆ ವತಿಯಿಂದ ನಿರ್ವಹಿಸಲಾಗುತ್ತಿದ್ದು, 13 ಕಂಬಗಳಿಗೆ ಬೀದಿ ದೀಪಗಳನ್ನು ಅಳವಡಿಸಲು ಮುಂದಿನ ದಿನಗಳಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ವರದಿ ಮಾಡಿರುತ್ತಾರೆ.

ಮುಂದುವರೆದು, ಬೆಳಗಾವಿಯ ಕಾವೇರಿ ನಗರ 2ನೇ ಹಂತದ ಬಡಾವಣೆಗೆ ಕುಡಿಯುವ ನೀರಿನ ಸೌಲಭ್ಯಗಳನ್ನು ಒದಗಿಸಲು 600 ಮೀಟರ್ ಉದ್ದದ ನೀರಿನ ಕೊಳವೆಮಾರ್ಗ ಅಳವಡಿಸಲು 2017-18 ನೇ ಸಾಲಿನಲ್ಲಿ ಬೆಳಗಾವಿಯ ನೀರು ಸರಬರಾಜು ನಿರ್ವಹಣೆ ಹಾಗೂ ದುರಸ್ತಿಯಡಿ ರೂ.3.86 ಲಕ್ಷಗಳ ವೆಚ್ಚದಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಿ ಮಾರ್ಚ್ 2018 ರಿಂದ ಸದರಿ ಬಡಾವಣೆಗೆ ನೀರು ಸರಬರಾಜು ಮಾಡಲಾಗುತ್ತಿದೆ. ಅರ್ಜಿದಾರರ ಮನೆಯನ್ನು ಒಳಗೊಂಡಂತೆ ಒಟ್ಟು 14 ಮನೆಗಳಿಗೆ ನೀರು ಸರಬರಾಜು ಸಂಪರ್ಕವನ್ನು ನೀಡಲಾಗಿರುತ್ತದೆ ಎಂಬುದಾಗಿ ಸರ್ಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.

ಮೇಲ್ಕಂಡಂತೆ, ಸದರಿ ಪ್ರದೇಶದಲ್ಲಿ ಎಲ್ಲಾ ರೀತಿಯ ಅಭಿವೃದ್ಧಿ ಕೆಲಸಗಳನ್ನು ಕೈಗೊಂಡಿದ್ದು, ಮಾನ್ಯ ಉಪಲೋಕಾಯುಕ್ತರವರು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಸಲ್ಲಿಸಿರುವ ವರದಿಯನ್ವಯ ಪ್ರಸ್ತುತ ಬಡಾವಣೆಯಲ್ಲಿ ವಿವಿಧ ಯೋಜನೆಯಡಿ ಅಭಿವೃದ್ಧಿ ಕಾಮಗಾರಿಗಳನ್ನು ಕಾಲೋಚಿತವಾಗಿ ಕೈಗೊಳ್ಳಲಾಗಿರುವುದರಿಂದ (ಛಾಯಾ ಚಿತ್ರಗಳೊಂದಿಗೆ ಇತ್ತೀಚಿನ ವರದಿಯ ಪ್ರತಿಯನ್ನು ಲಗತ್ತಿಸಿದೆ), ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಲು ಸದರಿ ವರದಿಯನ್ನು ಮಾನ್ಯ ವಿಧಾನ ಮಂಡಲದ ಉಭಯ ಸದನಗಳಲ್ಲಿ ಮಂಡಿಸಲಾಗಿದೆ.

ಸಂಖ್ಯೆ: ನಅಇ 07 ಎಸಿಬಿ 2018.

(ರಾಜು ಪಿ.)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ
(ಮಹಾನಗರಪಾಲಿಕೆ-2)

(28)

P. 41

(4)

KARNATAKA LOKAYUKTA

No. COMPT/UPLOK/BGM-1714/2014

M.S. Building,
Dr. B.R. Ambedkar Veedhi,
Bengaluru.
Date: 29/02/2016.

**REPORT UNDER SECTION 12(1) OF THE KARNATAKA LOKAYUKTA ACT, 1984**

Sub: Proceedings against Sri Halagi, City Engineer, Belagavi City Corporation, Belagavi, about his misconduct- reg.

----

On the complaint filed by Sri Santhosh Balikai R/o No.55, Cauvery Nagar,Mandolli Road, 2nd Stage, Belagavi (hereinafter referred to as 'Complainant' for short) against Sri Halagi, City Engineer, Belgaum City Corporation, Belagavi (there-in-after referred to as 'Respondent' for short), alleging that even though the complainant and the residents of Kaveri Nagar, Belagavi remitted development charges to the City Corporation, the said Mahanagara Palike has not taken any action to provide basic necessities such as roads, drainages, drinking water and street lights to the said locality. He further submitted that the residents of the said locality addressed a letter to the Urban Development Minister requesting to provide basic amenities to the said locality, but of no avail. As such, the respondent being Public/Government Servant committed misconduct, an investigation was taken up by the Hon'ble Upa Lokayukta by invoking power vested u/s 9 of the Karnataka Lokayukta Act.

2. On the said complaint, the comments of the respondent were called for. The respondent submitted his comments stating that the questioned layout is not fully developed. It is the duty of the developer to provide civic amenities (basic amenities) to the said layout formed by

him. Since huge amount is required for providing basic necessities as requested by the complainant, the Mahanagar Palike has addressed a letter to the concerned to sanction fund from the Chief Minister's Special Grant Fund and that on priority basis some works with regard to the basic necessities have been undertaken.

3. On the said comments, a rejoinder was called for from the complainant. The complainant submitted his rejoinder stating that the said Mahanagara Palike is showing favour by providing basic necessities to only a part of the Layout excluding 3 rows of houses in the said layout including that of the complainant. To substantiate his contention, he has produced the photos of the layout and also a sketch of the layout marking the area which has been provided with basic necessities.

4. At this juncture, as it was felt that matter has to be investigated by our police at Belagavi, the matter was referred to Superintendent of Police, Karnataka Lokayukta, Belagavi to investigate and report. In turn, the Superintendent of Police, Karnataka Lokayukta, Belagavi entrusted the matter to Police Inspector, Karnataka Lokayukta, Belagavi (hereinafter referred to as 'I.O.'). The I.O submitted his report observing that the layout has been taken over by the City Development Authority, Belagavi and the said Authority has made efforts to get financial assistance from the Chief Minister's Special Fund. He further submitted that even efforts have been made by preparing the estimate to provide basic amenities.

5. As per the observation made by the I.O., the said layout in Sy.No.96/2B was developed by Sri Dhanasingh Bhavani and others of Belagavi. The said layout plan has been approved by the City Development Authority through its order No.[illegible]/2001-02/3-4 dated 23.10.2001. It has also been observed by the I.O. that in the

said order, the Urban Development Authority, Belagavi had put a condition that the applicant has to make developments out of his own expenditure within two years. It was also the condition that the developer/applicant has to make arrangements for the service of electricity and also water supply. Also the land demarked for civic amenities has been transferred to City Corporation. The I.O. submitted that during the course of spot inspection Sri Bavu Saheba Yellappa Surakodu, the Assistant Executive Engineer, South Sub Dvn.-I, Mahanagara Palike, Belagavi who was present at the spot, submitted that in the said layout, road has been developed in 1st to 3rd cross, so far as the remaining portion of the land is concerned Rs.40 lakh grant has been approved under Chief Minister's Special Fund and even estimate has been prepared. Further, tender process as per the rules would be taken up and action would be taken to see that the roads are developed in the remaining portion of the said layout.

6. On the said report of the I.O. reply was called for from the complainant. The complainant submitted his report stating that so far no action has been taken by the Belagavi Mahanagara Palike to develop roads and to provide other civic amenities in the remaining area of the said layout, though it was undertaken by the concerned Engineer before the investigating officer to provide the said civic amenities (basic necessities). Even the comments of the respondent disclose that action has been initiated by the respondent to provide the basic necessities (basic amenities) in the said layout and he has also admitted that the said layout has been transferred to Belagavi City Development Authority. These facts clearly show that the layout has been taken over by the City Development Authority, Belagavi and in some portion of said layout roads have been laid.

7. Further, it is clear from the documents that a portion of the layout where the complainant resides is developed by the Corporation

This fact is evident from the report of the I.O. and from the comments of the respondent. Further it is also clear that the Corporation had initiated action to get the funds from the Chief Minister's Special Fund and some of the works have been approved by the concerned authorities. When such is the case, Mahanagara Palike has to hasten the matter in developing the layout where the complainant resides.

8. Therefore, u/S 12(1) of Karnataka Lokayukta Act, 1984, a recommendation is made to the Department of Urban Development to take appropriate action to redress the grievance and hardship caused to the complainant and the residents of the said layout within 3 months from the date of this report and shall intimate or cause to be intimated to this Authority about the action taken on the said recommendation within one month thereof as per Section 12(2) of Karnataka Lokayukta Act.

(JUSTICE N ANAND)
Upa Lokayukta,
Karnataka State, Bengaluru.

## ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಜಿಎಂ-1714/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 25/05/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(5) ರನ್ವಯ ವರದಿ

ವಿಷಯ: ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರಡಿಯಲ್ಲಿ ದಿನಾಂಕ 29/02/2016ರ ವರದಿಯಲ್ಲಿ ಬೆಳಗಾವಿಯ ಕಾವೇರಿನಗರ 2ನೇ ಹಂತ ಇಲ್ಲಿನ ಬಡಾವಣೆಗೆ ಬೆಳಗಾವಿ ಮಹಾನಗರ ಪಾಲಿಕೆ ವತಿಯಿಂದ ಮೂಲಭೂತ ಸೌಕರ್ಯವನ್ನು ಒದಗಿಸುವ ಕುರಿತು ಮಾಡಿರುವ ಶಿಫಾರಸ್ಸನ್ನು ಇದುವರೆಗೂ ಅನುಷ್ಠಾನಗೊಳಿಸದೇ ಇರುವ ಬಗ್ಗೆ.

ಉಲ್ಲೇಖ:
1. ಆಯುಕ್ತರು, ಮಹಾನಗರ ಪಾಲಿಕೆ, ಬೆಳಗಾವಿ ಇವರ ಪತ್ರ ದಿನಾಂಕ:22/09/2016 ಮತ್ತು ಸದರಿ ಪತ್ರದೊಂದಿಗೆ ಉಪ ಆಯುಕ್ತರು (ಅಭಿವೃದ್ಧಿ), ಮಹಾನಗರ ಪಾಲಿಕೆ, ಬೆಳಗಾವಿ ಇವರು ಸಲ್ಲಿಸಿರುವ ವಿಚಾರಣಾ ವರದಿ ದಿನಾಂಕ 21/09/2016.
2. ಆಯುಕ್ತರು, ಮಹಾನಗರ ಪಾಲಿಕೆ, ಬೆಳಗಾವಿ ಇವರ ಪತ್ರ ದಿನಾಂಕ:31/03/2017.

*****

ಶ್ರೀ ಸಂತೋಷ್ ಬಾಳಪ್ಪ ಬಾಳಿಕಾಯಿ, ನಂ.55, ಕಾವೇರಿನಗರ, ಮಂಡೊಳ್ಳಿ ರಸ್ತೆ, 2ನೇಹಂತ, ಬೆಳಗಾವಿ (ಇನ್ನು ಮುಂದೆ ಇವರನ್ನು "ದೂರುದಾರರೆಂದು" ಸಂಬೋಧಿಸಲಾಗುವುದು) ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ತಾವು ವಾಸಿಸುತ್ತಿರುವ ಬೆಳಗಾವಿಯ ಕಾವೇರಿನಗರದಲ್ಲಿ ಮಹಾನಗರ ಪಾಲಿಕೆಯ ವತಿಯಿಂದ ಯಾವುದೇ ಅಭಿವೃದ್ಧಿ ಕಾರ್ಯ ನಡೆದಿರುವುದಿಲ್ಲ. ತಾವು ಮತ್ತು ತಮ್ಮ ಬಡಾವಣೆಯವರು ಮಹಾನಗರ ಪಾಲಿಕೆಗೆ ಬಡಾವಣೆ ಅಭಿವೃದ್ಧಿ ಶುಲ್ಕವನ್ನು ಕಟ್ಟಿದ್ದರೂ ಸಹ, ಸದರಿ ಬಡಾವಣೆಗೆ ಸರಿಯಾದ ರಸ್ತೆ, ಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಬೀದಿ ದೀಪದ ವ್ಯವಸ್ಥೆ ಇರುವುದಿಲ್ಲ. ಆದ್ದರಿಂದ, ಈ ಬಗ್ಗೆ ಮಹಾನಗರ ಪಾಲಿಕೆಯವರಿಗೆ ಮನವಿಯನ್ನು ಸಲ್ಲಿಸಿದ್ದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲವೆಂದು, ಆದ್ದರಿಂದ, ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿ ಸಲ್ಲಿಸಿದ್ದ ದೂರಿನ ಮೇರೆಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 9ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಯನ್ನು ಕೈಗೊಳ್ಳಲಾಗಿರುತ್ತದೆ.

2. ತನಿಖೆ ಕೈಗೊಂಡ ನಂತರ ಸದರಿ ಬಡಾವಣೆಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಅವಶ್ಯಕವೆಂದು ಕಂಡು ಬಂದ ಕಾರಣ, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರಡಿಯಲ್ಲಿ

ಮೂಲಭೂತ ಸೌಕರ್ಯಗಳನ್ನು ಒದಗಿಸುವಂತೆ ಮಾನ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ವರದಿಯನ್ನು ಸಲ್ಲಿಸಲಾಗಿತ್ತು. ಆದರೆ, ಸದರಿ ವರದಿಯ ಶಿಫಾರಸ್ಸನ್ನು ಅನುಷ್ಠಾನಗೊಳಿಸಲು ಘನ ಸರ್ಕಾರವು ವರದಿಯನ್ನು ಆಯುಕ್ತರು, ಮಹಾನಗರ ಪಾಲಿಕೆ, ಬೆಳಗಾವಿ ಇವರಿಗೆ ವಹಿಸಿದ್ದು, ಮಹಾನಗರ ಪಾಲಿಕೆಯ ಆಯುಕ್ತರು ಅನುದಾನದ ಲಭ್ಯತೆಯನ್ನು ಆಧರಿಸಿ ಮೂಲಭೂತ ಸೌಕರ್ಯವನ್ನು ಕಲ್ಪಿಸುವ ಕಾಮಗಾರಿಯನ್ನು ತೆಗೆದುಕೊಳ್ಳಲಾಗುವುದೆಂದು ದಿನಾಂಕ 22/09/2016ರ ಪತ್ರದ ಮುಖೇನ ತಿಳಿಸಿದ್ದು, ನಂತರ ದಿನಾಂಕ 31/03/2017 ರಂದು ಮತ್ತೊಂದು ಪತ್ರ ಬರೆದು, ಹಿಂದೆ ಬರೆದ ಪತ್ರದಲ್ಲಿ ತಿಳಿಸಿದ ಅಂಶಗಳನ್ನೇ ಪುನರುಚ್ಚರಿಸಿರುತ್ತಾರೆ (ಅಂದರೆ ಅನುದಾನದ ಲಭ್ಯತೆಯ ಆಧಾರದ ಮೇಲೆ ಮೂಲಭೂತ ಸೌಕರ್ಯದ ಕಾಮಗಾರಿ ನಿರ್ವಹಿಸಲಾಗುವುದೆಂದು ತಿಳಿಸಿರುತ್ತಾರೆ). ಆದ್ದರಿಂದ, ಸದರಿಯವರು ಸಲ್ಲಿಸಿರುವ ಈ ವರದಿಯು ಸಮಂಜಸವಾದ ಹಾಗೂ ನ್ಯಾಯಸಮ್ಮತವಾದ ವರದಿಯಾಗಿರುವುದಿಲ್ಲ.

3. ಆದ್ದರಿಂದ, ಮೇಲಿನ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(5)ರಡಿಯಲ್ಲಿ ಸಲ್ಲಿಸಿರುವ ಈ ವರದಿಯೊಂದಿಗೆ ಈ ಹಿಂದೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರಡಿಯಲ್ಲಿ ಸಲ್ಲಿಸಿರುವ ವರದಿಯ ಪ್ರತಿಯನ್ನು ಹಾಗೂ ಬೆಳಗಾವಿಯ ಮಹಾನಗರ ಪಾಲಿಕೆಯ ಆಯುಕ್ತರ ದಿನಾಂಕ:22/09/2016ರ ಹಾಗೂ 31/3/2017ರಂದು ಸಲ್ಲಿಸಿರುವ ಪತ್ರದ ಪತ್ರಿಯನ್ನು ಅಡಕ ಮಾಡಿ ಮಾನ್ಯ ಘನತೆವೆತ್ತ ರಾಜ್ಯಪಾಲರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಈ ಮೂಲಕ ಸಲ್ಲಿಸಲಾಗಿದೆ.

N. Anand

(ನ್ಯಾಯಮೂರ್ತಿ ಎನ್.ಆನಂದ)

ಉಪಲೋಕಾಯುಕ್ತರು,


ಕರ್ನಾಟಕ ರಾಜ್ಯ,


ಬೆಂಗಳೂರು.


ಪ್ರತಿಯನ್ನು:


ಸರ್ಕಾರದ ಕಾರ್ಯದರ್ಶಿಗಳು (ಎಮ್ & ಯುಡಿಎ) ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ.

# Kaveri Nagar 2nd stage- Roads near Balikayi house













BALIKAYI HOUSE

# Kaveri Nagar 2nd stage –Drain & Street light Completed











# Kaveri Nagar 2nd stage –Road works












# Kaveri Nagar 2nd stage –Road works













# Kaveri Nagar 2nd stage –Road work








# Kaveri Nagar 2nd stage –Road works Completed











# Kaveri Nagar 2nd stage – Road & Drain completed









(4)

ಕರ್ನಾಟಕ ರಾಜ್ಯಪಾಲರ ಸಚಿವಾಲಯ
KARNATAKA GOVERNOR'S SECRETARIAT

ದೂರವಾಣಿ : ೨೨೨೫೪೧೦೨
Telephone : 22254102
ಫ್ಯಾಕ್ಸ್ : ೦೮೦-೨೨೨೫೮೧೫೦
Fax : 080-22258150
email-ID:rajbhavan.karnataka@gmail.com

ಕ್ರಮಾಂಕ:
No.

ಅ.ಪೆ. ಸಂಖ್ಯೆ: ೫೦೩೩
P.B. No. 5033
ರಾಜ ಭವನ, ಬೆಂಗಳೂರು
RAJ BHAVAN, BANGALORE
PIN : 560 001

GS 48 EST 2017

Date:09.06.2017

**From:**
The Secretary to Governor,
Raj Bhavan, Bengaluru.

**To:**
The Additional Chief Secretary to Government,
Urban Development Department,
Vikasa Soudha Bengaluru-01.

Sir,

Sub: Submission of Report u/s. 12(5) of Karnataka Lokayukta Act, for having not complied with the recommendations made in the report submitted u/s 12(1) of Karnataka Lokayukta Act.

Ref: D.O.No. Compt/UPLOK/BGM-1714/2014/PP Dt:31-5-2017 from Sri.H.M.Nanjunda swamy, Registrar, Karnataka Lokayukta.

* * *

Adverting to the above, I am directed to forward herewith a copy of the Report under Section 12(5) received from the Karnataka Upalokayukta regarding miscounduct committed by Sri Halagi, City Engineer, Belagavi City Corporation, Belagavi for laying it before both the Houses of the State Legislature

Yours faithfully,

(Sd/- 12/6)
(Ganji Dattatreya)
Under Secretary to Governor (Adm)

Smart City

# ಬೆಳಗಾವಿ ಮಹಾನಗರ ಪಾಲಿಕೆ

ಸಿಟಿಎಸ್.ನಂ.4821/26,4821/27, ಆರ್.ಎಸ್.ನಂ.1005, ಸುಭಾಷನಗರ, ಬೆಳಗಾವಿ. ದೂರವಾಣಿ:0831-2405304, ಫ್ಯಾಕ್ಸ್: 2405306,
Email:itstaff_ulb_belgaum@yahoo.com. Website:www.belgaumcity.mrc.gov.in

ಕ್ರ.ಸಂ.ಮನಬೆ.ಸಾಆವಿ.ಸಿಬ್ಬಂದಿ.1.ವಿವ-33/2016-17 RPAD ದಿನಾಂಕ: 31-03-2017

ರಿಗೆ,
ಸಾರ್ವಜನಿಕ ಅಭಿಯೋಜಕರು,
ಕರ್ನಾಟಕ ಲೋಕಾಯುಕ್ತ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

ಮಾನ್ಯರೆ,

ವಿಷಯ: ಶ್ರೀ. ಸಂತೋಷ ಬಾಳಪ್ಪಾ ಬಾಳಿಕಾಯಿ, ಕಾವೇರಿ ನಗರ ಬೆಳಗಾವಿ ಇವರು ಅಭಿಯಂತರರು ಬೆಳಗಾವಿ ಮಹಾನಗರ ಪಾಲಿಕೆ ಇವರ ವಿರುದ್ಧ ಸಲ್ಲಿಸಿದ ದೂರಿನ ಬಗ್ಗೆ.

ಉಲ್ಲೇಖ: 1) ತಮ್ಮ ಕಾರ್ಯಾಲಯದ ಪತ್ರ ಸಂಖ್ಯೆ. ದೂರು/ಉಪಲೋಕ್/ಎಮ್‌ವೈಎಸ್/1714/2014/ಪಿಪಿ ದಿ. 20-03-2017.

2) ಈ ಕಾರ್ಯಾಲಯದ ಪತ್ರ ಸಂಖ್ಯೆ. ಮನಬೆ/ಸಾಆವಿ/ಸಿಬ್ಬಂದಿ-1/ವಿವ-33/2016-17 ದಿ. 22-09-2016, 24-12-2016 ಹಾಗೂ 10/03/2017

ಮೇಲ್ಕಾಣಿಸಿದ ವಿಷಯದ ಕುರಿತು ಉಲ್ಲೇಖ 1ರನ್ವಯ ಮಾನ್ಯ ಸಾರ್ವಜನಿಕ ಅಭಿಯೋಜಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರು ಶ್ರೀ. ಸಂತೋಷ ಬಾಳಪ್ಪಾ ಬಾಳಿಕಾಯಿ, ಕಾವೇರಿ ನಗರ ಬೆಳಗಾವಿ ಇವರು ಖರೀದಿಸಿ ವಾಸವಿರುವ ನಿವೇಶನವು ಖಾಸಗಿ ಲೇಔಟ್ ವಸತಿ ವಿನ್ಯಾಸವಿದ್ದು, ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸದೆ ಇರುವದರಿಂದ ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ನೋಟಿಸು ನೀಡಿದ್ದು ಸದರಿ ವಿಷಯದಲ್ಲಿ ಕೈಗೊಂಡ ಕ್ರಮದ ವರದಿಯನ್ನು ಸಲ್ಲಿಸಲು ಸೂಚಿಸಲಾಗಿದೆ. ಸದರಿ ವಿಷಯದಲ್ಲಿ ಉಪ ಆಯುಕ್ತರು (ಅಭಿವೃದ್ಧಿ) ಮಹಾನಗರ ಪಾಲಿಕೆ ಬೆಳಗಾವಿ ಇವರು ಪರಿಶೀಲಿಸಿ ಕೈಗೊಂಡ ಕ್ರಮದ ಕುರಿತು ವರದಿಯನ್ನು ಸಲ್ಲಿಸಿದ್ದು, ಸದರ ವರದಿಯನ್ನು ಈಗಾಗಲೇ ಉಲ್ಲೇಖ 2ರನ್ವಯ ಸಲ್ಲಿಸಿ ಮುಂದೆ ಅನುದಾನ ಲಭ್ಯತೆ ಆದರಿಸಿ ಮೂಲಭೂತ ಸೌಕರ್ಯ ಕಲ್ಪಿಸುವ ಕಾಮಗಾರಿಗಳನ್ನು ತೆಗೆದುಕೊಳ್ಳಬಹುದಾಗಿದೆ ಎಂದು ತಿಳಿಸಲಾಗಿದ್ದು, ಸದರಿ ಪ್ರಕರಣವನ್ನು ಇದೇ ಹಂತದಲ್ಲಿ ಮುಕ್ತಾಯಗೊಳಿಸಲು ಕೋರಲಾಗಿದೆ.

ಈಗ ಉಲ್ಲೇಖ 1ರನ್ವಯ ಮುಂದಿನ ಕ್ರಮದ ಬಗ್ಗೆ ವರದಿಯನ್ನು ಇದುವರೆಗೆ ಸಲ್ಲಿಸಿರುವದಿಲ್ಲವೆಂದು ತಿಳಿಸಿ, ವರದಿಯನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ದಿ. 19-04-2017 ರೊಳಗಾಗಿ ಸಲ್ಲಿಸಲು ಸೂಚಿಸಲಾಗಿದೆ. ಆದರೆ ಸದರಿ ನಿವೇಶನವು ಖಾಸಗಿ ಲೇಔಟ್ ವಸತಿ ವಿನ್ಯಾಸವಿದ್ದು, ಮೂಲಭೂತ ಸೌಕರ್ಯಗಳನ್ನು ಅನುದಾನ ಲಭ್ಯತೆ ಆಧಾರದ ಮೇಲೆ ನಿರ್ವಹಿಸಲಾಗುವದೆಂದು ಈ ಮೂಲಕ ಮತ್ತೊಮ್ಮೆ ಗೌರವ ಪೂರ್ವಕವಾಗಿ ಸಾದರಪಡಿಸಿದೆ.

ತಮ್ಮ ವಿಸ್ವಾಸಿ,

ಪ್ರತಿಕೆ :- ದಿ. 10-3-17ರ ತಪ್ಪಿದೆ ತ್ರುಟಿ.

ಆಯುಕ್ತರು, 31.3.17
ಮಹಾನಗರ ಪಾಲಿಕೆ, ಬೆಳಗಾವಿ.

ಮ. ಪಾ. ... ಬೆಳಗಾವಿ
ರವಾನೆ ...

(13)

(3)

<u>ಕರ್ನಾಟಕ ಲೋಕಾಯುಕ್ತ</u>

ನಂ.ಕಂಪ್ಲೆಂಟ್/ಉಪಲೋಕ್/ಬಿಜಿಎಂ-1714/2014/ಪಿಪಿ

ಬಹುಮಹಡಿಗಳ ಕಟ್ಟಡ,<br>ಡಾ:ಅಂಬೇಡ್ಕರ್ ವೀಧಿ,<br>ಬೆಂಗಳೂರು.<br>ದಿನಾಂಕ : 25/05/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(5) ರನ್ವಯ ವರದಿ

ವಿಷಯ: ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರಡಿಯಲ್ಲಿ ದಿನಾಂಕ 29/02/2016ರ ವರದಿಯಲ್ಲಿ ಬೆಳಗಾವಿಯ ಕಾವೇರಿನಗರ 2ನೇ ಹಂತ ಇಲ್ಲಿನ ಬಡಾವಣೆಗೆ ಬೆಳಗಾವಿ ಮಹಾನಗರ ಪಾಲಿಕೆ ವತಿಯಿಂದ ಮೂಲಭೂತ ಸೌಕರ್ಯವನ್ನು ಒದಗಿಸುವ ಕುರಿತು ಮಾಡಿರುವ ಶಿಫಾರಸ್ಸನ್ನು ಇದುವರೆಗೂ ಅನುಷ್ಠಾನಗೊಳಿಸದೇ ಇರುವ ಬಗ್ಗೆ.

ಉಲ್ಲೇಖ:
1. ಆಯುಕ್ತರು, ಮಹಾನಗರ ಪಾಲಿಕೆ, ಬೆಳಗಾವಿ ಇವರ ಪತ್ರ ದಿನಾಂಕ:22/09/2016 ಮತ್ತು ಸದರಿ ಪತ್ರದೊಂದಿಗೆ ಉಪ ಆಯುಕ್ತರು (ಅಭಿವೃದ್ಧಿ), ಮಹಾನಗರ ಪಾಲಿಕೆ, ಬೆಳಗಾವಿ ಇವರು ಸಲ್ಲಿಸಿರುವ ವಿಚಾರಣಾ ವರದಿ ದಿನಾಂಕ 21/09/2016.
2. ಆಯುಕ್ತರು, ಮಹಾನಗರ ಪಾಲಿಕೆ, ಬೆಳಗಾವಿ ಇವರ ಪತ್ರ ದಿನಾಂಕ:31/03/2017.

***-**

ಶ್ರೀ ಸಂತೋಷ್ ಬಾಳಪ್ಪ ಬಾಳಿಕಾಯಿ, ನಂ.55, ಕಾವೇರಿನಗರ, ಘುಂಡೊಳ್ಳಿ ರಸ್ತೆ, 2ನೇಹಂತ, ಬೆಳಗಾವಿ (ಇನ್ನು ಮುಂದೆ ಇವರನ್ನು "ದೂರುದಾರರೆಂದು" ಸಂಬೋಧಿಸಲಾಗುವುದು) ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ತಾವು ವಾಸಿಸುತ್ತಿರುವ ಬೆಳಗಾವಿಯ ಕಾವೇರಿನಗರದಲ್ಲಿ ಮಹಾನಗರ ಪಾಲಿಕೆಯ ವತಿಯಿಂದ ಯಾವುದೇ ಅಭಿವೃದ್ಧಿ ಕಾರ್ಯ ನಡೆದಿರುವುದಿಲ್ಲ. ತಾವು ಮತ್ತು ತಮ್ಮ ಬಡಾವಣೆಯವರು ಮಹಾನಗರ ಪಾಲಿಕೆಗೆ ಬಡಾವಣೆ ಅಭಿವೃದ್ಧಿ ಶುಲ್ಕವನ್ನು ಕಟ್ಟಿದ್ದರೂ ಸಹ, ಸದರಿ ಬಡಾವಣೆಗೆ ಸರಿಯಾದ ರಸ್ತೆ, ಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಬೀದಿ ದೀಪದ ವ್ಯವಸ್ಥೆ ಇರುವುದಿಲ್ಲ. ಆದ್ದರಿಂದ, ಈ ಬಗ್ಗೆ ಮಹಾನಗರ ಪಾಲಿಕೆಯವರಿಗೆ ಮನವಿಯನ್ನು ಸಲ್ಲಿಸಿದ್ದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲವೆಂದು, ಆದ್ದರಿಂದ, ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿ ಸಲ್ಲಿಸಿದ್ದ ದೂರಿನ ಮೇರೆಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 9ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಯನ್ನು ಕೈಗೊಳ್ಳಲಾಗಿರುತ್ತದೆ.

2. ತನಿಖೆ ಕೈಗೊಂಡ ನಂತರ ಸದರಿ ಬಡಾವಣೆಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಅವಶ್ಯಕವೆಂದು ಕಂಡು ಬಂದ ಕಾರಣ, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರಡಿಯಲ್ಲಿ,

ಮೂಲಭೂತ ಸೌಕರ್ಯಗಳನ್ನು ಒದಗಿಸುವಂತೆ ಮಾನ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ವರದಿಯನ್ನು ಸಲ್ಲಿಸಲಾಗಿತ್ತು. ಆದರೆ, ಸದರಿ ವರದಿಯ ಶಿಫಾರಸ್ಸನ್ನು ಅನುಷ್ಠಾನಗೊಳಿಸಲು ಘನ ಸರ್ಕಾರವು ವರದಿಯನ್ನು ಆಯುಕ್ತರು, ಮಹಾನಗರ ಪಾಲಿಕೆ, ಬೆಳಗಾವಿ ಇವರಿಗೆ ವಹಿಸಿದ್ದು, ಮಹಾನಗರ ಪಾಲಿಕೆಯ ಆಯುಕ್ತರು ಅನುದಾನದ ಲಭ್ಯತೆಯನ್ನು ಆಧರಿಸಿ ಮೂಲಭೂತ ಸೌಕರ್ಯವನ್ನು ಕಲ್ಪಿಸುವ ಕಾಮಗಾರಿಯನ್ನು ತೆಗೆದುಕೊಳ್ಳಲಾಗುವುದೆಂದು ದಿನಾಂಕ 22/09/2016ರ ಪತ್ರದ ಮುಖೇನ ತಿಳಿಸಿದ್ದು, ನಂತರ ದಿನಾಂಕ 31/03/2017 ರಂದು ಮತ್ತೊಂದು ಪತ್ರ ಬರೆದು, ಹಿಂದೆ ಬರೆದ ಪತ್ರದಲ್ಲಿ ತಿಳಿಸಿದ ಅಂಶಗಳನ್ನೇ ಪುನರುಚ್ಚರಿಸಿರುತ್ತಾರೆ (ಅಂದರೆ ಅನುದಾನದ ಲಭ್ಯತೆಯ ಆಧಾರದ ಮೇಲೆ ಮೂಲಭೂತ ಸೌಕರ್ಯದ ಕಾಮಗಾರಿ ನಿರ್ವಹಿಸಲಾಗುವುದೆಂದು ತಿಳಿಸಿರುತ್ತಾರೆ). ಆದ್ದರಿಂದ, ಸದರಿಯವರು ಸಲ್ಲಿಸಿರುವ ಈ ವರದಿಯು ಸಮಂಜಸವಾದ ಹಾಗೂ ನ್ಯಾಯಸಮ್ಮತವಾದ ವರದಿಯಾಗಿರುವುದಿಲ್ಲ.

3. ಆದ್ದರಿಂದ, ಮೇಲಿನ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(5)ರಡಿಯಲ್ಲಿ ಸಲ್ಲಿಸಿರುವ ಈ ವರದಿಯೊಂದಿಗೆ ಈ ಹಿಂದೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರಡಿಯಲ್ಲಿ ಸಲ್ಲಿಸಿರುವ ವರದಿಯ ಪ್ರತಿಯನ್ನು ಹಾಗೂ ಬೆಳಗಾವಿಯ ಮಹಾನಗರ ಪಾಲಿಕೆಯ ಆಯುಕ್ತರ ದಿನಾಂಕ:22/09/2016ರ ಹಾಗೂ 31/3/2017ರಂದು ಸಲ್ಲಿಸಿರುವ ಪತ್ರದ ಪತ್ರಿಯನ್ನು ಅಡಕ ಮಾಡಿ ಮಾನ್ಯ ಘನತೆವೆತ್ತ ರಾಜ್ಯಪಾಲರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಈ ಮೂಲಕ ಸಲ್ಲಿಸಲಾಗಿದೆ.

N. Anand
(ನ್ಯಾಯಮೂರ್ತಿ ಎನ್.ಆನಂದ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ,
ಬೆಂಗಳೂರು. 25/4/17

ಪ್ರತಿಯನ್ನು:

ಸರ್ಕಾರದ ಕಾರ್ಯದರ್ಶಿಗಳು (ಎಮ್ & ಯುಡಿಎ) ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ.

# KARNATAKA LOKAYUKTA

H.M. Nanjundaswamy
Registrar

Office of the Lokayukta
M.S. Building,
Dr. B.R. Ambedkar Veedhi,
Bengaluru - 560 001.
Date:31/05/2017

D.O.No.Compt/Uplok/BGM/1714/2014/PP

Respected Sir,

Sub: Submission of Report u/s 12(5) of Karnataka Lokayukta Act for having not complied with the recommendations made in the report submitted u/s 12(1) of Karnataka Lokayukta Act.

---

I am directed by the Hon'ble Upalokayukta-1 to submit Report dt. 25/05/2017 under Section 12(5) of the Karnataka Lokayukta Act, along with connected documents for kind perusal and consideration of his Excellency.

As directed, I request you to kindly place this matter before His Excellency the Governor of Karnataka.

With regards,

Yours sincerely,

To:
Shri V.R. Ramesh,
Special Secretary to His Excellency
The Governor of Karnataka,
Raj Bhavan, BENGALURU.

Copy to:

The Secretary to Government (M & UDA), Urban Development Department, Vikasa Soudha, Bangalore.

ಕರ್ನಾಟಕ ರಾಜ್ಯಪಾಲರ ಸಚಿವಾಲಯ
KARNATAKA GOVERNOR'S SECRETARIAT

ದೂರವಾಣಿ : ೨೨೨೫೪೧೦೨
Telephone : 22254102
ಫ್ಯಾಕ್ಸ್ : ೦೮೦-೨೨೨೫೮೧೫೦
Fax : 080-22258150
email-ID:rajbhavan.karnataka@gmail.com

ಕ್ರಮಾಂಕ:
No.

ಅ.ಪೆ. ಸಂಖ್ಯೆ: ೫೦೩೩
P.B. No. 5033
ರಾಜ ಭವನ, ಬೆಂಗಳೂರು
RAJ BHAVAN, BANGALORE
PIN : 560 001

GS 48 EST 2017

Date:09.06.2017

From:
The Secretary to Governor,
Raj Bhavan, Bengaluru.

To:
The Additional Chief Secretary to Government,
Urban Development Department,
Vikasa Soudha Bengaluru-01.

Sir,

Sub: Submission of Report u/s. 12(5) of Karnataka Lokayukta Act, for having not complied with the recommendations made in the report submitted u/s 12(1) of Karnataka Lokayukta Act.

Ref: D.O.No. Compt/UPLOK/BGM-1714/2014/PP Dt:31-5-2017 from Sri.H.M.Nanjunda swamy, Registrar, Karnataka Lokayukta.

* * *

Adverting to the above, I am directed to forward herewith a copy of the Report under Section 12(5) received from the Karnataka Upalokayukta regarding miscounduct committed by Sri Halagi, City Engineer, Belagavi City Corporation, Belagavi for laying it before both the Houses of the State Legislature

Yours faithfully,

(Ganji Dattatreya)
Under Secretary to Governor (Adm)

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ ೯ ಎಸಿಬಿ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: .01.2018

"ಅತೀ ಜರೂರು"

ಇವರಿಂದ :
ಸರ್ಕಾರದ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ, ಬೆಂಗಳೂರು.

ಮಹಾನಗರ ಪಾಲಿಕೆ, ಬೆಳಗಾವಿ.
ನಗರ ಅಭಿಯಂತರರು ಉತ್ತರ / ದಕ್ಷಿಣ
ದಿನಾಂಕ 8-2-2018
ಸಂಖ್ಯೆ 6187
ವಿಭಾಗ ...
ನಗರ ಅಭಿಯಂತರರು

ಇವರಿಗೆ :
ಆಯುಕ್ತರು
ಮಹಾನಗರ ಪಾಲಿಕೆ
ಬೆಳಗಾವಿ.

ಮಾನ್ಯರೆ,

16

ವಿಷಯ: ಶ್ರೀ ಹಲಗಿ, ಕಾರ್ಯಪಾಲಕ ಇಂಜಿನಿಯರ್, ಬೆಳಗಾವಿ ಮಹಾನಗರ ಪಾಲಿಕೆ ಇವರ ವಿರುದ್ಧ ಲೋಕಾಯುಕ್ತದಲ್ಲಿ ದಾಖಲಾಗಿರುವ ದೂರಿನ ಬಗ್ಗೆ.

ಉಲ್ಲೇಖ: 1. ಲೋಕಾಯುಕ್ತ ಕಚೇರಿಯ ಪತ್ರ ಸಂಖ್ಯೆ: Compt/Uplok/BGM/1714/ PP, ದಿ: 02.01.2018.
2. ಘನವೆತ್ತ ರಾಜ್ಯಪಾಲರ ಅಧೀನ ಕಾರ್ಯದರ್ಶಿರವರ ಪತ್ರ ಸಂಖ್ಯೆ: ಜಿಎಸ್/48/ಇಎಸ್‌ಟಿ/2017, ದಿನಾಂಕ: 09.06.2017.

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರಗಳು ಮತ್ತು ಅಡಕಗಳ ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿದೆ. ಸದರಿ ಪತ್ರಗಳಲ್ಲಿ ತಿಳಿಸಿರುವಂತೆ ಶ್ರೀ ಹಲಗಿ, ಕಾರ್ಯಪಾಲಕ ಇಂಜಿನಿಯರ್, ಬೆಳಗಾವಿ ಮಹಾನಗರ ಪಾಲಿಕೆ ಇವರ ವಿರುದ್ಧ ಲೋಕಾಯುಕ್ತದಲ್ಲಿ ದಾಖಲಾಗಿರುವ ದೂರಿಗೆ ಸಂಬಂಧಿಸಿದಂತೆ ಪರಿಶೀಲಿಸಿ, ಪಾಲಿಕೆಯ ಸಮರ್ಪಕ ಉತ್ತರವನ್ನು ಜರೂರಾಗಿ ಸರ್ಕಾರಕ್ಕೆ ಸಲ್ಲಿಸುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಕೆ. ಎನ್. ಜಗದೀಶರೆಡ್ಡಿ)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ)
(ಮಹಾನಗರ ಪಾಲಿಕೆ-2 ಮತ್ತು ಸಮನ್ವಯ),
ನಗರಾಭಿವೃದ್ಧಿ ಇಲಾಖೆ.

ಮಹಾನಗರ ಪಾಲಿಕೆ, ಬೆಳಗಾವಿ
6 FEB 2018
PWD AEE
ಆಯುಕ್ತರು

DC Admin 14/2/18

15

Smart City
MISSION TRANSFORM-NATION

स्वच्छ भारत
एक कदम स्वच्छता की ओर

# ಬೆಳಗಾವಿ ಮಹಾನಗರ ಪಾಲಿಕೆ

ಸಿಟಿಎಸ್.ನಂ.4821/26,4821/27, ಆರ್.ಎಸ್.ನಂ.1005, ಸುಭಾಷನಗರ, ಬೆಳಗಾವಿ. ದೂರವಾಣಿ:0831-2405304, ಫ್ಯಾಕ್ಸ್: 2405306,
Email:itstaff_ulb_belgaum@yahoo.com. Website:www.belgaumcity.mrc.gov.in

ದಿನಾಂಕ: 5/12/2022

ಕ್ರ.ಸಂ/ಮನಬೆ/ಸಾಆವಿ/ಸಿಬ್ಬಂದಿ-1/ಸಿ.ಆರ್- /2022-23

RPAD

ಇವರಿಗೆ,
ಸರ್ಕಾರದ ಜಂಟಿ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಮಾನ್ಯರೇ,

ವಿಷಯ: ಬೆಳಗಾವಿ ಮಹಾನಗರ ಪಾಲಿಕೆಯ ಕಾವೇರಿನಗರ ಬಡವಾಣೆಗೆ ಮೂಲ ಸೌಲಭ್ಯಗಳನ್ನು ಒದಗಿಸದಿರುವ ಬಗ್ಗೆ.

ಉಲ್ಲೇಖ: 1. ತಮ್ಮ ಅ. ಸ. ಪತ್ರ ಸಂಖ್ಯೆ: ನಅಇ/07/ಎಸಿಬಿ/2018 ದಿನಾಂಕ : 29/10/2022.
2. ಈ ಕಾರ್ಯಾಲಯದ ಪತ್ರ ಸಂ. ಮನಬೆ.ಸಾಆವಿ.ಸಿಬ್ಬಂದಿ 1/ವಿವ/33/2016-17 ದಿನಾಂಕ: 17/12/2018 ಹಾಗೂ 17/01/2019.
3. ಈ ಕಾರ್ಯಾಲಯದ ಪತ್ರ ಸಂ. ಮನಬೆ/ಸಕಾಅ/ದವೆ-1/ವಿವ/2019-20 ದಿನಾಂಕ: 19/12/2019.
4. ಈ ಕಾರ್ಯಾಲಯದ ಪತ್ರ ಸಂ. ಮನಬೆ/ಸಕಾಅ/ದವೆ-1/2020-21 ದಿನಾಂಕ: 22-06-2021.
5. ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ಇವರ ಪತ್ರ ಸಂ.: 500733/ಡಿಎಂಎ/ ಇ.ಎಸ್.ಕ್ಯೂ-3/ಬೆಟಿಎಂಸಿ-1/2021. ದಿನಾಂಕ: 25-10-2022.

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಶ್ರೀ. ಸಂತೋಷ ಬಾಳಿಕಾಯಿ, ಇವರು ಬೆಳಗಾವಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಕಾವೇರಿ ನಗರ ಬಡಾವಣೆಯಲ್ಲಿ ಪಾಲಿಕೆಯಿಂದ ಮೂಲಭೂತ ಸೌಕರ್ಯವನ್ನು ಒದಗಿಸಿರುವುದಿಲ್ಲ ಆದ್ದರಿಂದ ಮಾನ್ಯ ಲೋಕಾಯುಕ್ತರು ಇವರಿಗೆ ದೂರು ಸಲ್ಲಿಸಿದ ಕಾರಣ ಈ ಕುರಿತು ಮಾನ್ಯ ಉಪ ಲೋಕಾಯುಕ್ತರು ಕಲಂ 12 (1) ರಡಿಯಲ್ಲಿ ಸಲ್ಲಿಸಿದ ವರದಿಯಲ್ಲಿನ ಶಿಫಾರಸ್ಸುಗಳನ್ನು ಕೂಡಲೆ ಅನುಷ್ಠಾನಗೊಳಿಸಿ ವರದಿ ಸಲ್ಲಿಸುವಂತೆ ತಮ್ಮ ಕಾರ್ಯಾಲಯದ ಪತ್ರ ದಿನಾಂಕ: 14-03-2018 ರನ್ವಯ ನಿರ್ದೇಶಿಸಲಾಗಿತ್ತು.

o/c

ಬೆಳಗಾವಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಕಾವೇರಿ ನಗರ ಇಲ್ಲಿ ಖಾಸಗಿ ಭೂಮಿಯಲ್ಲಿ ನಗರಾಭಿವೃದ್ದಿ ಪ್ರಾಧಿಕಾರ ಬೆಳಗಾವಿ ಇವರಿಂದ ವಿನ್ಯಾಸ ನಕ್ಷೆ ಅನುಮೋದನೆಗೊಂಡು ನಿವೇಶನದಲ್ಲಿ ದೂರದಾರರು

ವಾಸಿಸುತ್ತಾರೆ. ಖಾಸಗಿ ವಿನ್ಯಾಸ ನಕ್ಷೇ ಅನುಮೋದನೆ ಪಡೆದ ಮಾಲಿಕರಿಂದ ಸದರಿ ಪ್ರದೇಶದ ಅಭಿವೃದ್ಧಿ ಕಾಮಗಾರಿ ಹಾಗೂ ಮೂಲ ಸೌಲಭ್ಯಗಳನ್ನು ಒದಗಿಸುವುದು ನಿಯಮಾವಳಿಯನ್ವಯ ಬಂಧನಕಾರಕ ಇರುತ್ತದೆ ಹಾಗೂ ಅಭಿವೃದ್ಧಿ ಕಾಮಾಗಾರಿಗಳನ್ನು ನಿಯಮಾನುಸಾರ ಪೂರ್ಣಗೊಂಡ ನಂತರ ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಮುಕ್ತಾಯ ಪ್ರಮಾಣ ಪತ್ರ ಪಡೆದು ಸದರಿ ವಿನ್ಯಾಸ ನಕ್ಷೆಯಲ್ಲಿ ಅನುಮೋದಿಸಿದ ಉದ್ಯಾನವನಗಳು, ರಸ್ತೆಗಳನ್ನು ಕುರಿತು ಕಾಯ್ದಿರಿಸಿದ ನಿವೇಶನಗಳನ್ನು ಮಹಾನಗರ ಪಾಲಿಕಗೆ ಹಸ್ತಾಂತರಿಸಲು ವಿನ್ಯಾಸ ಮಾಲಿಕರಿಂದ ಅಗತ್ಯ ದಾಖಲಾತಿಗಳೊಂದಿಗೆ ಕೋರಿಕೆ ಅರ್ಜಿಯನ್ನು ಸಲ್ಲಿಸ ಬೇಕಾಗಿರುತ್ತದೆ. ಈ ಕಾರ್ಯಾಲಯದ ಉಪ ಆಯುಕ್ತರು (ಅಭಿವೃದ್ಧಿ) ಇವರು ಸದರಿ ವಿಷಯದ ವಿಚಾರಣಾ ಕೈಗೊಂಡು ದಿನಾಂಕ 21-09-2015 ರಲ್ಲಿ ಪ್ರಸ್ತುತ ವಿನ್ಯಾಸದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸದೆ ಇರುವುದರಿಂದ ದಿನಾಂಕ 31-12-2003 ರಂದು ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ಸದರಿ ಸರ್ವೆ ನಂ. 96/2ಬಿ ಗೆ ನೀಡಿರುವ ವಿನ್ಯಾಸ ಅನುಮೋದನೆಯನ್ನು ಮುಂದಿನ ಆದೇಶವಾಗುವ ವರೆಗೆ ಅಮಾನತ್ತು ಪಡಿಸಿರುತ್ತಾರೆ. ಹಾಗೂ ಮುಂದಿನ ಆದೇಶವಗುವ ವರೆಗೆ ಸದರಿ ವಿನ್ಯಾಸದಲ್ಲಿಯ ನಿವೇಶನಗಳಲ್ಲಿ ಯಾವುದೇ ಕಟ್ಟಡಗಳನ್ನು ನಿರ್ಮಾಣ ಮಾಡಬಾರದೆಂದು ಹಾಗೂ ನಿವೇಶನಗಳನ್ನು ಪ್ರಾಧಿಕಾರದ ಅನುಮತಿ ಪಡೆಯದೆ ಮಾರಾಟ ಮಾಡಬಾರದೆಂದು ಆದೇಶಿಸಿರುತ್ತಾರೆ. (ಪ್ರತಿ ಲಗತ್ತಿಸಿದೆ) ಹಾಗೂ ನೋಟಿಸ ಸಂ. ಬೆನಪ್ರಾ/ಯೋ. ವಿನ್ಯಾಸ -7/2001-02/1066 ದಿನಾಂಕ: 01-01-2004 ಹಾಗೂ ಬೆನಪ್ರಾ/ಯೋ/ವಿನ್ಯಾಸ-7/2001-02/2773 ದಿನಾಂಕ: 06-03-2004 ರನ್ವಯ ಶ್ರೀ ಧನಸಿಂಗ ಜಯಸಿಂಗ ಭವನಿ ಇವರಿಗೆ ಜಾರಿ ಮಾಡಿ ಪ್ರಸ್ತುತ ವಿನ್ಯಾಸದಲ್ಲಿ ಸಂಪೂರ್ಣ ಅಭಿವೃದ್ಧಿ ಕಾರ್ಯಗಳನ್ನು ಪೂರ್ಣಗೋಳಿಸದಿರುವ ಕಾರಣ ಸದರಿ ವಿನ್ಯಾಸದ ಅನುಮೋದನೆ ಏಕೆ ರದ್ದು ಪಡಿಸಬಾರದು ಎಂದು ತಿಳಿಸಿ ಲಿಖಿತ ಹೇಳಿಕೆಯನ್ನು ಸಲ್ಲಿಸಲು ಸೂಚಿಸಿದ ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಲಾಗಿದೆ. ಈ ಎಲ್ಲ ವ್ಯವಸ್ಥೆಯನ್ನು ಮಾಡದೆ ಇರುವ ಸ್ಥಿತಿಯಲ್ಲಿ ಬೆಳಗಾವಿ ಮಹಾನಗರ ಪಾಲಿಕೆಯಿಂದ ಉಲ್ಲೇಖ (2)ರ ಈ ಕಾರ್ಯಾಲಯದ ಪತ್ರದನ್ವಯ ಪ್ರಸ್ತುತ ಬಡಾವಣೆಯಲ್ಲಿ ಬೀದಿ ದೀಪ ಲೈನ್ ಆಳವಡಿಸಿದ ಬಗ್ಗೆ ಕುಡಿಯುವ ನೀರು ಸರಬರಾಜು ಬಗ್ಗೆ ಹಾಗೂ ಸಿ.ಸಿ.ಗಟಾರ ಹಾಗೂ ರಸ್ತೆ ಸುಧಾರಣೆ ಬಗ್ಗೆ ಹೆಸ್ಕಾಂ, ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ ಆದರಂತೆ ಮಹಾನಗರ ಪಾಲಿಕೆಯಿಂದ ಕೈಗೊಂಡ ಅಭಿವೃದ್ಧಿ ಕಾಮಗಾರಿಯ ವರದಿಯನ್ನು ಮಾನ್ಯರವರಿಗೆ ಸಲ್ಲಿಸಲಾಗಿದೆ ಸದರಿ ಪತ್ರದ ಪ್ರತಿ ಹಾಗೂ ಆಡಕಗಳನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ. ತಮ್ಮ ಕಾರ್ಯಾಲಯದ ಪತ್ರ ದಿನಾಂಕ: 27/12/2018 ರನ್ವಯ ಈ ಕಾರ್ಯಾಲಯದ ಉಲ್ಲೇಖ 3ರ ಪತ್ರದನ್ವಯ ಪ್ರಸ್ತುತ ಬಡಾವಣೆಯಲ್ಲಿ ಕೈಗೊಂಡ ಅಭಿವೃದ್ಧಿ ಕಾಮಗಾರಿಯ ಬಗ್ಗೆ ಕಾಲೋಚಿತ ವರದಿಯನ್ನು ಹಾಗೂ ತಮ್ಮ ಕಾರ್ಯಾಲಯದ ಪತ್ರ ದಿನಾಂಕ: 05-10-2020 ರನ್ವಯ ಮತ್ತೊಮ್ಮೆ ಕಾಲೋಚಿತ ವರದಿಯನ್ನು ಸಲ್ಲಿಸಲಾಗಿದೆ ಸದರಿ ಪತ್ರದ ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ.

ಶ್ರೀ. ಹಲಗಿ ಡಿ. ಎ. ಇವರು ದಿನಾಂಕ: 23-06-2014 ರಂದು ಈ ಕಾರ್ಯಾಲಯದಿಂದ ವರ್ಗಾವಣೆಯಾಗಿ ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ ಕಚೇರಿಗೆ ಹಾಜರಾಗಿರುತ್ತಾರೆ ತದನಂತರ ದಿನಾಂಕ: 14-05-2015 ರಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಇಲ್ಲಿ ವರ್ಗಾವಣೆಯಾಗಿ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ ತದನಂತರ ದಿನಾಂಕ: 31-07-2017 ರಂದು ವಯೋಮಿತಿ ಆಧಾರದ ಮೇಲೆ ನಿವೃತ್ತಿ ಹೊಂದಿರುತ್ತಾರೆ. ಮಾನ್ಯ ಲೋಕಾಯುಕ್ತ ಕಾಯ್ದೆ 12(1) ಹಾಗೂ ಕರ್ನಾಟಕ ಲೋಕಾಯುಕ್ತ ಕಾಯ್ದೆ 1989ರ ಕಲಂ 12(5) ರನ್ವಯ ವರದಿಯನ್ವಯ ಈಗಾಗಲೇ ಮಹಾನಗರ ಪಾಲಿಕೆಯಿಂದ ಕ್ರಮ ಕೈಗೊಂಡಿದ್ದು ಹಾಗೂ ಇಲ್ಲಿಯವರೆಗೆ ಪ್ರಸ್ತುತ ಬಡಾವಣೆಯಲ್ಲಿ ವಿವಿಧ ಯೋಜನೆಯಡಿ ಕೈಗೊಂಡ ಅಭಿವೃದ್ಧಿ ಕಾಮಗಾರಿ ಬಗ್ಗೆ ಮತ್ತೋಮ್ಮೆ ಕಾಲೋಚಿತ

ವರಿದಿಯನ್ನು ಛಾಯಾಚಿತ್ರದೊಂದಿಗೆ ಈ ಪತ್ರದೊಂದಿಗೆ ಲಗತ್ತಿಸಿ ಸದರಿ ಪ್ರದೇಶದಲ್ಲಿ ಎಲ್ಲ ರೀತಿಯ ಅಭಿವೃದ್ಧಿ ಕೆಲಸಗಳನ್ನು ಕೈಗೊಂಡಿರುವ ಕಾರಣ ಸದರಿ ದೂರನ್ನು ಕೈಬಿಡಲು ಮಾನ್ಯರವರಿಗೆ ಗೌರವ ಪೂರ್ವಕವಾಗಿ ಕೋರಲಾಗಿದೆ.

ಮ. ಪಾಲಿಕೆ ಬೆಳಗಾವಿ
ರವಾನೆ 08/12/2022

ತಮ್ಮ ವಿಶ್ವಾಸಿ,

ಆಯುಕ್ತರು,

ಮಹಾನಗರ ಪಾಲಿಕೆ ಬೆಳಗಾವಿ.

ಪ್ರತಿ: ಮಾನ್ಯ ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.

oc

ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ:080- 22867172 / 22866302
ಫ್ಯಾಕ್ಸ್: 080-22863576 / 22861665
Email: dmablr@gmail.com
Website: www.municipaladmn.gov.in
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು 560001.

ನಂ:932734, ಡಿ.ಎಂ.ಎ/ಇಎನ್‌ಕ್ಯೂ/ಬಿಜಿಎಂಸಿ/5/2022 ದಿನಾಂಕ: 19.11.2022

ಇವರಿಗೆ,

ಆಯುಕ್ತರು,
ಬೆಳಗಾವಿ ಮಹಾನಗರಪಾಲಿಕೆ,
ಬೆಳಗಾವಿ.

ಮಾನ್ಯರೆ,

**ವಿಷಯ:** ಬೆಳಗಾವಿ ಮಹಾನಗರಪಾಲಿಕೆಯಲ್ಲಿನ ಕಾವೇರಿ ನಗರ ಬಡಾವಣೆಗೆ ಮೂಲಸೌಲಭ್ಯಗಳನ್ನು ಒದಗಿಸದಿರುವ ಕುರಿತು ಲೋಕಾಯುಕ್ತಕ್ಕೆ ನೀಡಿರುವ ದೂರಿನ ಬಗ್ಗೆ.

**ಉಲ್ಲೇಖ:** ಸರ್ಕಾರದ ಅ.ಸ.ಪತ್ರ ಸಂಖ್ಯೆ ನಅಇ/07/ಎಸಿಬಿ/2018 ದಿನಾಂಕ 29.10.2022.

*****

ಬೆಳಗಾವಿ ಮಹಾನಗರಪಾಲಿಕೆಯಲ್ಲಿನ ಕಾವೇರಿನಗರ ಬಡಾವಣೆಗೆ ಮೂಲಸೌಲಭ್ಯಗಳನ್ನು ಒದಗಿಸದಿರುವ ಕುರಿತು ಶ್ರೀ ಸಂತೋಷ್ ಬಾಳಿಕಾಯಿರವರು ಮಹಾನಗರಪಾಲಿಕೆಯ ಸಿಟಿ ಇಂಜಿನಿಯರ್‌ರಾದ ಶ್ರೀ ಹಲಗಿರವರ ವಿರುದ್ಧ ಲೋಕಾಯುಕ್ತಕ್ಕೆ ನೀಡಿರುವ ದೂರಿನ ಬಗ್ಗೆ ಸರ್ಕಾರದಿಂದ ಕ್ರಮ ಜರುಗಿಸದ ಹಿನ್ನೆಲೆಯಲ್ಲಿ ಮಾನ್ಯ ಉಪ ಲೋಕಾಯುಕ್ತರು ನಿಯಮ 12(5)ರ ವರದಿಯಲ್ಲಿ ಮಾನ್ಯ ರಾಜ್ಯಪಾಲರಿಗೆ ದಿನಾಂಕ 25.05.2016ರಲ್ಲಿ ವಿಶೇಷ ವರದಿ ಸಲ್ಲಿಸಿದ್ದು, ಸದರಿ ಪ್ರಕರಣದ ಬಗ್ಗೆ ವಿವರಣಾತ್ಮಕ ಟಿಪ್ಪಣಿಯನ್ನು ಕರ್ನಾಟಕ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸಲು ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಿದ್ದು, ಈ ಸಂಬಂಧ ಮಹಾನಗರಪಾಲಿಕೆಯಿಂದ ಸರ್ಕಾರಕ್ಕೆ ಸಲ್ಲಿಸಿರುವ ವರದಿ ಪರಿಪೂರ್ಣವಾಗಿರದ ಹಿನ್ನೆಲೆಯಲ್ಲಿ ಘಟನಾವಳಿಗಳ ಪಟ್ಟಿಯೊಂದಿಗೆ ವಿವರಣಾತ್ಮಕ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಲು ಈಗಾಗಲೇ ಸರ್ಕಾರದಿಂದ ಹಲವು ಬಾರಿ ಸೂಚಿಸಿದಾಗ್ಯೂ ಯಾವುದೇ ವರದಿಯನ್ನು ಈತಹಲ್‌ವರೆವಿಗೂ ಸಲ್ಲಿಸದಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿರುವುದಲ್ಲದೆ, ವಿಳಂಬದಿಂದಾಗಿ ವ್ಯತಿರಿಕ್ತ ಪರಿಣಾಮ ಉಂಟಾಗುವ ಸಂಭವವಿರುವುದರಿಂದ ಅಪೇಕ್ಷಿತ ವರದಿಯನ್ನು ಸರ್ಕಾರಕ್ಕೆ ಜರೂರಾಗಿ ಸಲ್ಲಿಸಲು ಸೂಚಿಸಿದೆ. (ಸರ್ಕಾರದ ಪತ್ರ ಲಗತ್ತಿಸಿದೆ)

ತಮ್ಮ ವಿಶ್ವಾಸಿ,

Manjunath

ನಿರ್ದೇಶಕರು
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು.

ಪ್ರತಿಯನ್ನು ಮಾಹಿತಿಗಾಗಿ:

ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರುರವರಿಗೆ.

ದೂರವಾಣಿ:080- 22867172 / 22866302
ಫ್ಯಾಕ್ಸ್: 080-22863576 / 22861665
Email: dmablr@gmail.com
Website: www.municipaladmn.gov.in
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು 560001.

**ನಿರ್ದೇಶಕರ ಕಛೇರಿ**
**ಪೌರಾಡಳಿತ ನಿರ್ದೇಶನಾಲಯ**

**ಕರ್ನಾಟಕ ಸರ್ಕಾರ**

ನಂ:932734, ಡಿ.ಎಂ.ಎ/ಇಎನ್‌ಕ್ಯೂ/ಬಿಜಿಎಂಸಿ/5/2022 ದಿನಾಂಕ: 8 .12.2022

ಇವರಿಗೆ,
ಆಯುಕ್ತರು,
ಬೆಳಗಾವಿ ಮಹಾನಗರಪಾಲಿಕೆ,
ಬೆಳಗಾವಿ.

ಮಾನ್ಯರೆ,

**ವಿಷಯ:** ಬೆಳಗಾವಿ ಮಹಾನಗರಪಾಲಿಕೆಯಲ್ಲಿನ ಕಾವೇರಿ ನಗರ ಬಡಾವಣೆಗೆ ಮೂಲಸೌಲಭ್ಯಗಳನ್ನು ಒದಗಿಸದಿರುವ ಕುರಿತು ಲೋಕಾಯುಕ್ತಕ್ಕೆ ನೀಡಿರುವ ದೂರಿನ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಅ.ಸ.ಪತ್ರ ಸಂ:ನಅಇ/07/ಎಸಿಬಿ/2018, ದಿ:29.10.2022.
2. ನಿರ್ದೇಶನಾಲಯದ ಪತ್ರದ ಸಮಸಂಖ್ಯೆ ದಿ:19.11.2022.
3. ಶ್ರೀ ಹಲಗಿರವರ ಮನವಿ ದಿ:18.11.2022.

*****

ಬೆಳಗಾವಿ ಮಹಾನಗರಪಾಲಿಕೆಯಲ್ಲಿನ ಕಾವೇರಿನಗರ ಬಡಾವಣೆಗೆ ಮೂಲಸೌಲಭ್ಯಗಳನ್ನು ಒದಗಿಸದಿರುವ ಕುರಿತು ಶ್ರೀ ಸಂತೋಷ್ ಬಾಳಿಕಾಯಿರವರು ಮಹಾನಗರಪಾಲಿಕೆಯ ಸಿಟಿ ಇಂಜಿನಿಯರ್‌ರಾದ ಶ್ರೀ ಹಲಗಿರವರ ವಿರುದ್ಧ ಲೋಕಾಯುಕ್ತಕ್ಕೆ ನೀಡಿರುವ ದೂರಿನ ಬಗ್ಗೆ ಸರ್ಕಾರದಿಂದ ಕ್ರಮ ಜರುಗಿಸದ ಹಿನ್ನೆಲೆಯಲ್ಲಿ ಮಾನ್ಯ ಉಪ ಲೋಕಾಯುಕ್ತರು ನಿಯಮ 12(5)ರ ವರದಿಯಲ್ಲಿ ಮಾನ್ಯ ರಾಜ್ಯಪಾಲರಿಗೆ ದಿನಾಂಕ 25.05.2016ರಲ್ಲಿ ವಿಶೇಷ ವರದಿ ಸಲ್ಲಿಸಿದ್ದು, ಸದರಿ ಪ್ರಕರಣದ ಬಗ್ಗೆ ವಿವರಣಾತ್ಮಕ ಟಿಪ್ಪಣಿಯನ್ನು ಕರ್ನಾಟಕ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸಲು ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಿದ್ದು, ಈ ಸಂಬಂಧ ಮಹಾನಗರಪಾಲಿಕೆಯಿಂದ ಸರ್ಕಾರಕ್ಕೆ ಸಲ್ಲಿಸಿರುವ ವರದಿ ಪರಿಪೂರ್ಣವಾಗಿರದ ಹಿನ್ನೆಲೆಯಲ್ಲಿ ಘಟನಾವಳಿಗಳ ಪಟ್ಟಿಯೊಂದಿಗೆ ವಿವರಣಾತ್ಮಕ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಲು ಈಗಾಗಲೇ ಸರ್ಕಾರದಿಂದ ಹಲವು ಬಾರಿ ಸೂಚಿಸಿದಾಗ್ಯೂ ಯಾವುದೇ ವರದಿಯನ್ನು ಈತಹಲ್‌ವರೆವಿಗೂ ಸಲ್ಲಿಸದಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿರುವುದಲ್ಲದೆ, ವಿಳಂಬದಿಂದಾಗಿ ವ್ಯತಿರಿಕ್ತ ಪರಿಣಾಮ ಉಂಟಾಗುವ ಸಂಭವವಿರುವುದರಿಂದ ಅಪೇಕ್ಷಿತ ವರದಿಯನ್ನು ಸರ್ಕಾರಕ್ಕೆ ಜರೂರಾಗಿ ಸಲ್ಲಿಸಲು ಉಲ್ಲೇಖ(2)ರನ್ವಯ ಸೂಚಿಸಲಾಗಿದ್ದು, ಯಾವುದೇ ವರದಿ ಸ್ವೀಕೃತವಾಗಿರುವುದಿಲ್ಲ.

ಈ ಮಧ್ಯೆ ಶ್ರೀ ಹಲಗಿರವರು ನಿರ್ದೇಶನಾಲಯಕ್ಕೆ ಉಲ್ಲೇಖ(2)ರನ್ವಯ ಮನವಿ ಸಲ್ಲಿಸಿ, ಯಾವುದೇ ಇಲಾಖಾ ವಿಚಾರಣೆಯಿರುವುದಿಲ್ಲವೆಂಬುದಾಗಿ ಬೆಳಗಾವಿ ಹಾಗೂ ಮೈಸೂರು ಮೂಡಾ ಆಯುಕ್ತರು, ಬೆಳಗಾವಿ ಮಹಾನಗರಪಾಲಿಕೆಯ ಆಯುಕ್ತರು ಸರ್ಕಾರಕ್ಕೆ ಮತ್ತು ನಿರ್ದೇಶನಾಲಯಕ್ಕೆ ವರದಿ ನೀಡಿರುವ ಹಿನ್ನೆಲೆಯಲ್ಲಿ ನಿಯಮಾನುಸಾರ ಮನವಿಯಲ್ಲಿನ ಅಂಶಗಳನ್ನು ಪರಿಗಣಿಸಲು ವಿನಂತಿಸಿರುವುದನ್ನು ಪರಿಶೀಲಿಸಿ, ಸರ್ಕಾರದ ಪತ್ರ ದಿನಾಂಕ 29.10.2022ರ ಹಾಗೂ ಶ್ರೀ ಹಲಗಿರವರ ಮನವಿಯ ಬಗ್ಗೆ ಸಮಗ್ರ ವರದಿಯನ್ನು ಸರ್ಕಾರಕ್ಕೆ ನೇರವಾಗಿ ಸಲ್ಲಿಸಲು ಕೋರಿದೆ.

ತಮ್ಮ ವಿಶ್ವಾಸಿ,

8/12/22

ಜಂಟಿ ನಿರ್ದೇಶಕರು(ಆಡಳಿತ)
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು.

09 DEC 2022
6322

**ಪ್ರತಿಯನ್ನು ಮಾಹಿತಿಗಾಗಿ:**
ಶ್ರೀ ಡಿ.ಎ.ಹಲಗಿ, ಕಾರ್ಯನಿರ್ವಾಹಕ ಅಭಿಯಂತರರು(ನಿ), ಪ್ಲಾಟ ನಂ.244, ಬೂಡಾ ಸ್ಕೀಂ ನಂ.51, ನಕ್ಷತ್ರ ಕಾಲೋನಿ, ಬೆಳಗಾವಿ 590009.